SRI K.H. PATIL.— If it is brought to the notice of the Government, will take serious steps to rectify them.

ಶ್ರೀ ಎಂ. ಬಿ. ರಾಮಸ್ವಾಮಿ.—(ಬಿ) ಭಾಗಕ್ಕೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದಾರೆ. ಅವರಿಗೆ ಪರಿಹಾರವನ್ನು ಕೊಟ್ಟಿಲ್ಲ, ಹಾಗೂ ತೋಟಿತಳವಾರರ ಬಗ್ಗೆ ಮಾನ್ಯ ಮಿರಾಸಿ ಇದೆ. ಅದರ ಬಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗಿದೆಯೇ? ಕ್ರಮ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವೇನು? ತೆಗೆದುಕೊಳ್ಳದೆ ಹೋದರೆ ಎಷ್ಟು ದಿವಸದಲ್ಲಿ ತೆಗೆದುಕೊಳ್ಳುತ್ತೀರಿ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದನಕ್ಕೆ ಗೊತ್ತಿದ್ದಮಟ್ಟಿಗೆ ಈ ವಿಷಯದಲ್ಲಿ ಸುಪ್ರೀಂ ಕೋರ್ಟವರೆಗೂ ಸಹ ಅರ್ಜಿದಾರರಂ ತಕರಾರುಗಳನ್ನು ಮಾಡಿ ಸುಪ್ರೀಮ ಕೋರ್ಟಿನ ನಿರ್ಣಯವಾಗ ಬೇಕಾದರೆ ಬಹಳ ತಡವಾಯಿತು. ಸುಪ್ರೀಂ ಕೋರ್ಟ್ ನಿರ್ಣಯವಾದ ನಂತರ ಸರ್ಕಾರದವರು ಕಾನೂನನ್ನು ತಿದ್ದುಪಡಿ ಮಾಡಿ ಈಗಾಗಲೇ ಡೆಪ್ಯುಟಿ ಕಮಿಷನರ ಅಧಿಕಾರವನ್ನು ಅಸಿಸ್ಟೆಂಟ್ ಕಮಿಷನರಿಗೆ ಕೊಡಲಾಗಿದೆ. ಈ ಬಗ್ಗೆ ತ್ವರಿತ ಗತಿಯಲ್ಲಿ ಕೆಲಸ ಮಾಡಬೇಕೆಂದು ಕೂಡ ಆದೇಶವನ್ನು ಕೊಡಲಾಗಿದೆ.

ಶ್ರೀ ಟಿ. ಎಂ. ಮಂಜುನಾಥ್.—ತೋಟಿತಳವಾರರಂ ಬಹಳ ಹಿಂದೆ ಕೆಲಸ ಮಾಡುತ್ತ, ಇದ್ದವರಂ ಕೆಲಸವನ್ನು ಬಿಟ್ಟಿದ್ದಾರೆ. ಈಗ ಕೆಲಸ ಮಾಡುತ್ತಿರುವವರಿಗೆ ಖಾತೆ ಬದಲಾವಣೆ ಮಾಡಿ ಕೊಡುವುದಕ್ಕೆ ತಹಸೀಲ್ದಾರರ ಕಚೇರಿಯಲ್ಲಿ ತೊಂದರೆಯಾಗಿದೆ. ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಸೂಕ್ತವಾಗಿ ಮಾಡಿಸಿ ಕೊಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.— ನೋಟೀಸ್

ಶ್ರೀ ಜೆ. ಪುಟ್ಟಸ್ವಾಮಿ.—ತೋಟಿ ತಳವಾರರ ಪ್ರಶ್ನೆಯನ್ನು ೨೫ ವರ್ಷಗಳಾದರೂ ಕೂಡ ಸರ್ಕಾರ ವಿಳಂಬ ಮಾಡುತ್ತ ಬಂದಿದೆ. ಈಗಲಾದರೂ ಅಸಿಸ್ಟೆಂಟ್ ಕಮಿಷನರ್ ರವರಿಗೆ ಅಧಿಕಾರ ಕೊಟ್ಟಿದ್ದರೂ ಕೂಡ ಅವರು ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಈ ಬಗ್ಗೆ ಜಾಗ್ರತೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಕೆ. ಎಚ್ ಪಾಟೀಲ್.—ಮಾನ್ಯ ಸದಸ್ಯರಿಗೆ ತೊಂದರೆಗಳಿದ್ದರೆ ನನ್ನ ಕಡೆಗೆ ಕಳುಹಿಸಿದರೆ ತೀವರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ರಾಜ್ಯದಲ್ಲಿ ಎಷ್ಟು ಜನ ತೋಟಿ, ತಳವಾರ ಮತ್ತು ನೀರಗಂಟಿ ಗಳಿದ್ದಾರೆ? ಎಷ್ಟು ಜನಗಳಿಗೆ ಪರಿಹಾರ ಕೊಡಲಾಗಿದೆ, ಇನ್ನೆಷ್ಟು ಜನ ಬಾಕಿ ಇದ್ದಾರೆ?

ಶ್ರೀ ಕೆ.ಎಚ್. ಪಾಟೀಲ್.—ನೋಟೀಸ್ ಬೇಕು.

ಶ್ರೀ ಪಿ. ಮುನಿಯಪ್ಪ.—ತೋಟಿ, ತಳವಾರರಂ ಮತ್ತು ನೀರುಗಂಟಿಗಳು ತಾಲ್ಲೂಕು ಕಚೇರಿಗಳಲ್ಲಿ ಬಹಳ ಕಷ್ಟ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ.ಎಚ್. ಪಾಟೀಲ್.—ಈ ಜನಾಂಗ ಕಷ್ಟ ಪಡುತ್ತಿರುವ ಬಗ್ಗೆ ನಮ್ಮ ಸಹಾನುಭೂತಿ ಇದೆ.

APPOINTMENT OF EXECUTIVE ENGINEERS IN PUBLIC WORKS DEPARTMENT.

638 SRI H.D. DEVE GOWDA.—(Holenarasipura).—

Will the Minister for Public Works and Electricity be pleased to State.—

(*a*) the rules and regulations followed by Government in appointing Executive Engineers in Public Works Department :

(*b*) whether there are any strict service rules followed in this behalf (the details of Cadre and Recruitment Rules may please be furnished) :

(*c*) whether the said service rules have been followed so far;

(*d*) the number of posts of Executive Engineers for which temporary appointment (*ad hoc* arrangements) have been made and the number of posts are yet to be filled up?

SRI H. M. CHANNABASAPPA (Minister for Public Works and Electricity)

(*a*) The posts of Executive Engineers are filled up by promotion from the cadre of Assistant Engineer Division I.

(*b*) Yes. According to the Cadre and Recruitment Rules, promotions to the posts of Executive Engineer are required to be made from among Assistant Engineers Division I, who have put in five years service as Assistant Engineers.

(*c*) Yes. For all regular promotions to the cadre.

(*d*) 54 posts of Executive Engineers have been filled by placing Assistant Engineers in independent charge of the post. This arrangement is purely temporary. There are fourteen posts of Executive Engineers at present to be filled up.

ಶ್ರೀ ಎಚ್. ಡಿ. ದೇವೇಗೌಡ.—ಖಿಳ ಹುದ್ದೆಗಳನ್ನು ಹಂಗಾಮಿಯಾಗಿ ಭರ್ತಿ ಮಾಡಲಾಗಿದೆ ಎಂದು ಹೇಳಿದ್ದಾರೆ. ಇದಕ್ಕೆ ಕಾರಣವೇನು ಎಂದು ತಿಳಿಸುತ್ತಾರೆಯೇ?

‡ಶ್ರೀ ಎಚ್.ಎಂ. ಚನ್ನಬಸಪ್ಪ.—ಅಸಿಸ್ಟೆಂಟ್ ಇಂಜನಿಯರುಗಳಿಗೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಗಳಾಗಿ ಬಡ್ತಿ ಮಾಡತಕ್ಕ ವಿಚಾರದಲ್ಲಿ ಅಸಿಸ್ಟೆಂಟ್ ಇಂಜನಿಯರುಗಳ ಪೈಕಿ ಸೀನಿಯಾರಿಟಿ ಪಟ್ಟಿ ತಯಾರು ಮಾಡುತ್ತಾರೆ. ಅಸಿಸ್ಟೆಂಟ್ ಇಂಜಿನಿಯರುಗಳ ಸೀನಿಯಾರಿಟಿ ಪಟ್ಟಿ ತಯಾರು ಮಾಡುವಾಗ ಫೈಪ್ ಕ್ಯಾಂಡಿಡೇಟ್ಸ್‌ಗೆ ಸೀನಿಯಾರಿಟಿ ಕೊಡಬೇಕೇ ಅಥವಾ ಮೊದಲೇ ಪ್ರಮೋಟ್ ಆಗಿದ್ದ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿರುವವರಿಗೆ ಸೀನಿಯಾರಿಟಿ ಕೊಡಬೇಕೇ ಎನ್ನುವ ವಿಷಯದ ಬಗ್ಗೆ ಜಿಜ್ಞಾಸೆಗೆ ಬಂದು ಹಲವಾರು ವರ್ಷಗಳಲ್ಲಿ ನಾಲ್ಕಾರು ಹುಕುಂಗಳಾಗಿವೆ. ಆದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ನ್ಯಾಯವಾದ ಪಾಲಿಸಿಯನ್ನು ಹಾಕಿಕೊಡು ಡೈರೆಕ್ಟ್ ಮಾಡತಕ್ಕ ಪರಿಸ್ಥಿತಿಯಲ್ಲಿ ಸರ್ಕಾರವಿದೆ. ಆ ತೀರ್ಮಾನವಾದ ಕೂಡಲೇ ಸಲೀಸಾಗಿ ಎಕ್ಸಿಕ್ಯೂಟಿವ್ ಇಂಜನಿಯರುಗಳಾಗಿ ಬಡ್ತಿ ಕೊಡತಕ್ಕುದು ವಿಧಿನಿಯಮಗಳಿಗೆ ಅನುಗುಣವಾಗಿ ನಡೆಯಲಿದೆ. ೧೯೭೧ರಲ್ಲಿ ಕೆಲವು ವೇಕೆನ್ಸಿಗಳು ಬಿದ್ದುವು. ಆ ಕಾಲದಲ್ಲಿ ಈ ಬಗ್ಗೆ ಒಂದು ಖಚಿತವಾದ ತೀರ್ಮಾನ ತೆಗೆದುಕೊಂಡಿರಲಿಲ್ಲ. ಆದಕ್ಕೆ ಏನು ಮಾಡಿದರು ಎಂದರೆ ಈ ಖಿಳ ಜನರನ್ನೂ ಅಡಹಾಕ್ ಬೇಸಿಸ್ ಮೇಲೆ ಟೆಂಪೊರರಿಯಾಗಿ ನೇಮಕ ಮಾಡಿದರು ಇನ್ ಜಾರ್ಜ್ ಅರೇಂಜಮೆಂಟ್ಸ್ ಎಂದು ಮಾಡಿಲ್ಲ ೧೯೭೧ರಲ್ಲಿ ಇಂಡಿಪೆಂಡೆಂಟ್ ಚಾರ್ಜ್ ಎಂದು ಮಾಡಿ ಖಿಳ ಜನರನ್ನು ಎಕ್ಸಿಕ್ಯೂಟಿವ್ ಇಂಜಿನಿಯರಾಗಿ ನೇಮಕ ಮಾಡಿದ್ದಾರೆ.

ಶ್ರೀ ಎಚ್.ಡಿ. ದೇವೇಗೌಡ.—ತಾವು ಹೇಳಿದ್ದೀರಿ, ಈ ಅಸಿಸ್ಟೆಂಟ್ ಇಂಜಿನಿಯರ್ ಪ್ರಮೋಟೀಸ್, ಮತ್ತು ಪ್ರೊಬೇಷನರುಗಳ ಬಗ್ಗೆ ಒಂದು ಸೀನಿಯಾರಿಟಿ ಲಿಸ್ಟನ್ನು ಮಾಡತಕ್ಕಂಥ ಬಗ್ಗೆ ಖಿಳ ಹುಕುಂಗಳು ಆಗಿವೆ ಎಂದು. ಹಿಂದೆ ಅಸಿಸ್ಟೆಂಟ್ ಇಂಜನಿಯರ್‌ಗಳನ್ನು ಎಕ್ಸಿಕ್ಯುಟೀವ್ ಇಂಜನಿಯರ್‌ಗಳಾಗಿ ಪ್ರಮೋಟ್ ಮಾಡತಕ್ಕಂಥ ಕಾಲದಲ್ಲಿ ಅನುಸರಿಸಿದ ನೀತಿ ಏನು ? ಇಗ ಆ ನೀತಿಯಿಂದ ತಾವು ಅಡಹಾಕ್ ಅರೇಂಜ್‌ಮೆಂಟ್ ಮಾಡಿದ್ದೀರ , ಆ ನೀತಿಯ ಆಧಾರದ ಮೇಲೆ ಇದನ್ನು ಮಾಡಿದ್ದೀರೋ ಅಥವಾ ಬದಲಾವಣೆ ಮಾಡಿ ಮಾಡಿದ್ದೀರೋ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇದು ಮಾಡಿದ್ದು ೧೯೭೧ರ ಏಪ್ರಿಲ್‌ನಲ್ಲಿ. ಆಗ ಈ ಸರ್ಕಾರ ಇರಲಿಲ್ಲ ಈಗ ಪ್ರಮೋಷನ್ ಮಾಡಬೇಕಾದ ಪ್ರಸಂಗ ಬಂದ ಕಾಲದಲ್ಲಿ ಇವನ್ನೆಲ್ಲಾ ಪರಿಶೀಲಿಸುತ್ತೇವೆ. ಸರ್ಕಾರದ ಅಭಿಪ್ರಾಯದಲ್ಲಿ ಇಂಡಿಪೆಂಡೆಂಟ್ ಚಾರ್ಜ ಎನ್ನುವುದಕ್ಕೆ ಅರ್ಥ ಇರಲಿಲ್ಲ. ಏಕೆಂದರೆ ಇದು ಲೀಗಲ್ ಅಲ್ಲಲ್ಲಿ ಮತ್ತು ಸ್ಯಾಟ್ಯಟುರಿಯಾಗಿ ಇವರು ಕೆಲವು ಅಧಿಕಾರಗಳನ್ನು ಚಲಾಯಿಸುವುದಕ್ಕಾಗುವುದಿಲ್ಲ ಶೀಘ್ರವಾಗಿ ಇವೆಲ್ಲವನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ, ಹಿಂದೆ ನಡೆದಿರ ತಕ್ಕಂಥ ಮತ್ತು ನ್ಯಾಯವಾಗಿ ನಡೆಯಬೇಕಾದಂಥಾದನ್ನು ಏನು ಮಾಡಬೇಕು, ಯಾರು ಯಾರಿಗೆ ಅನ್ಯಾಯ ವಾಗುತ್ತದೆ. ಎನ್ನುವ ಬಗ್ಗೆ ಲಾ ಡಿಪಾರ್ಟಮೆಂಟನ್ನು ಕನ್‌ಸಲ್ಟ್‌ಮಾಡಿ ಇದರ ಬಗ್ಗೆ ಸೂಕ್ತ ನಿರ್ಧಾರವನ್ನು ತಕ್ಷಣದಲ್ಲಿ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಚ್ ಡಿ. ದೇವೇಗೌಡ.—ಈಗ ಈ ಅಡಹಾಕ್ ಅರೇಂಜಮೆಂಟು ತಮ್ಮ ಕಾಲದಲ್ಲಿ ಆಗಿಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ರಾಷ್ಟ್ರಾಧ್ಯಕ್ಷರ ಆಳ್ವಿಕೆಯ ಕಾಲದಲ್ಲಿ ಈ ಒಂದು ಇಂಡಿಪೆಂಡೆಂಟ್ ಚಾರ್ಜ ಬಗ್ಗೆ ಹುಕುಂ ಅನ್ನು ಜಾರಿಗೆ ತೆಗೆದುಕೊಂಡಿದ್ದಾರೆ. ಆ ಕಾಲದಲ್ಲಿ ಒಂದು ಹೊಸ ಹುಕುಂ ಮಾಡಿದ್ದಾರೆ ಎಂದು ಹೇಳಿದರೆ ಬಹುಶಃ ತಪ್ಪಾಗುವುದಿಲ್ಲ. ೬೦ ಪ್ರೊಬೇಷನರ್ಸ್ ಳಾ ರೆಕ್ರೂಟೀಸ್ ಈ ರೇಷಿಯೋ ಇರಬೇಕು ಎಂಬ ನಿರ್ಣಯವನ್ನು ರಾಷ್ಟ್ರಾಧ್ಯಕ್ಷರ ಆಳ್ವಿಕೆಯ ಕಾಲದಲ್ಲಿ ಮಾಡಿದ್ದಾರೆ. ಅದು ಹಿಂದೆ ಇದ್ದಂಥ ಒಂದು ನಿಯಮಾವಳಿಗಳ ಪ್ರಕಾರ ಅಲ್ಲ, ಅದು ಹೇಗೆ ಕ್ಯಾಪ್ ಆಫ್ ಆಯಿತು ?

ಶ್ರೀ ಎಚ್. ಎಂ. ಚೆನ್ನಬಸಪ್ಪ .—ಈ ೬೦-೪೦ ಪ್ರಮೋಟೀಸ್ ವರ್ಸ್‌ಸ್ ಡೈರೆಕ್ಟ ರೆಕ್ರೂಟೀಸ್ ಮಾಡಬೇಕು ಎಂದು ಹೇಳಿ, ಅವರು ಹುಕುಂ ಮಾಡಿ ೫೪ ಜನಕ್ಕೆ ಅಡ್‌ಹಾಕ್ ಅರೇಂಜಮೆಂಟಿನಲ್ಲಿ ಇಟ್ಟರು. ಈಗ ಮಾಡಿದರು ಎನ್ನ ತಕ್ಕಂಥ ವಿಷಯವನ್ನು ಪರಿಶೀಲನೆ ಮಾಡಬೇಕು. ಇದನ್ನೆಲ್ಲಾ ದೃಷ್ಟಿಯಲ್ಲಿಟ್ಟು ಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ದೇವರಾಜ ಅರಸ್ .—(ಮುಖ್ಯಮಂತ್ರಿಗಳು) ಈ ಪ್ರೊಬೇಷನರ್ಸ್ ಮತ್ತು ಪ್ರಮೋಟೀಸ್ ವಿಚಾರ ಕೇವಲ ಪಬ್ಲಿಕ್ ವರ್ಕ್ಸ್ ಇಲಾಖೆ ಒಂದರಲ್ಲೆ ಅಲ್ಲ, ಇನ್ನು ಕೆಲವು ಡಿಪಾರ್ಟಮೆಂಟಿನಲ್ಲಿಯೂ ಇದೆ. ರೆವಿನ್ಯೂ ಡಿಪಾರ್ಟಮೆಂಟಿನಲ್ಲಿಯೂ ಇದೆ. ಒಂದೊಂದು ಡಿಪಾರ್ಟಮೆಂಟಿನಲ್ಲಿ ಒಂದೊಂದು ಸಾರಿ ಒಂದೊಂದು ರೀತಿಯಾದಂಥ ಕಾನೂನನ್ನು ಮಾಡಿಬಿಟ್ಟಿದ್ದಾರೆ. ಒಂದು ಸಾರಿ ಒಂದು ಸೆಟ್ ಆಫ್ ಪೀಪಲ್ ಪ್ರಮೋಷನ್, ಮತ್ತು ಡೈರೆಕ್ಟ ರೆಕ್ರೂಟೀಸ್ ಬಂದಾಗ, ಒಂದು ಸೆಟ್ ಆಫ್ ರೂಲ್ಸ, ಹೀಗೆ ಒಂದು ಕನ್‌ಸಿಸ್ಟೆನ್ಸಿ ಮೊದಲಿನಿಂದ ಬರಲಿಲ್ಲ. I am not going to the motives behind it. whatever it is, ಜಸ್ಟಿಫೈಯಬಲ್ ಮೋಟೀವ್ಸ್ ಇರಬಹುದು, ಒಟ್ಟಿನಲ್ಲಿ ಅದರ ಪರಿಣಾಮ ಏನು ಅಂದರೆ, the whole problem complex ಆಯಿತು. ನಮ್ಮ ರೆವಿನ್ಯೂ ಡಿಪಾರ್ಟಮೆಂಟಿನಲ್ಲಿ ಹೀಗೆ ಆಗಿದೆ. ಅಗ್ರಿಕಲ್ಚರಲ್ ಡಿಪಾರ್ಟಮೆಂಟಿನಲ್ಲಿಯೂ ಹೀಗೆ ಆಗಿದೆಯೆಂದು ಕಾಣುತ್ತದೆ. ಹಾಗೆ ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲೂ ಆಗಿದೆ. ಶ್ರೀವರ್ ದೇವೇಗೌಡರು ಹೇಳಿದ ಹಾಗೆ, ಈ ವಿಚಾರದಲ್ಲಿ the Law Department has taken a particular view. ಈ ವ್ಯೂ ಕೆಲವರಿಗೆ ಹಿಡಿಸಲಿಲ್ಲ ಅಂತ ಕಾಣುತ್ತದೆ. ಈಗ ಅವರೂ ಇವರೂ ಕೋರ್ಟಿಗೆ ಹೋಗುತ್ತಾರೆ. ಆದ್ದರಿಂದ ಅಷ್ಟೊಂದು, ಇಷ್ಟೊಂದು ಪ್ರಮೋಷನ್‌ಕೊಟ್ಟು ಒಂದು ತರಹ ನ್ಯಾಯ ಮಾಡಿದರು. To get the works done ನಮ್ಮ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಅಡ್‌ಹಾಕ್ ಆಗಿ ಇಂಡಿಪೆಂಡಿಂಟ್ ಚಾರ್ಜನಲ್ಲಿ ಇಟ್ಟು ಬಿಟ್ಟರು ಇಂಡಿಪೆಂಡೆಂಟ್ ಚಾರ್ಜನಲ್ಲಿ ಇಟ್ಟ ಹಾಗೆ ಕಾನೂನು ರೀತ್ಯ, ಅಧಿಕೃತವಾದ ಅಧಿಕಾರ ಮಾಡುವ ಕೆಲಸ ಗಳನ್ನು ಈತ ಮಾಡುವುದಕ್ಕೆ ಆಗುವುದಿಲ್ಲ. ಉಸ್ತುವಾರಿಯನ್ನು ನೋಡುವುದು ಮಾತ್ರ, ಈ ಇಂಡಿಪೆಂಡೆಂಟ್ ಚಾರ್ಜ ಅಧಿಕಾರಿಗಳು ಮಾಡುವ ಕೆಲಸ. He cannot be called an officer in the regular way. ಈಗ ಪುನಃ ಈ ಪ್ರಶ್ನೆ ನಮ್ಮ ಮುಂದೆ ಬಂದಿದೆ. ವಿತನ್ಮಧ್ಯೆ ರೆವಿನ್ಯೂ ಡಿಪಾರ್ಟಮೆಂಟಿನಲ್ಲಿ ಪ್ರಮೋಟೀಸ್ ವರ್ಸ್‌ಸ್ ಪ್ರೊಬೇಷನರ್ಸ್ ವಿಷಯದಲ್ಲಿ ಸಿನಿಯಾರಿಟಿ ಅನ್ನು ಹೇಗೆ ಫಿಕ್ಸ್ ಮಾಡಬೇಕು ಎನ್ನುವ ಬಗ್ಗೆ ಹೈಕೋರ್ಟಿಗೆ ಕೇಸು ಹೋಗಿದೆ. ಹೈಕೋರ್ಟಿನಿಂದಲೂ ನಮಗೆ ತೊಂದರೆಯಾಗಿದೆ, ಏಕೆಂದರೆ, ಈಗ ಲಾ ಡಿಪಾರ್ಟಮೆಂಟ್‌ನವರು ಒಂದು ವ್ಯೂ ಹೇಳುತ್ತಾರೆ, ಹಿಂದಿನ ಸರ್ಕಾರದವರು ಒಂದು ರೀತಿಯ ತೀರ್ಮಾನ ಮಾಡಿದ್ದಾರೆ. ಇನ್ನು ಯಾವ ರೀತಿ ನಾವು ಮಾಡಿದರೂ, ಎಲ್ಲರೂ ಕೋರ್ಟಿಗೆ ಹೋಗಿಯೇ ಹೋಗುತ್ತಾರೆ. ಆದ್ದರಿಂದ, ಈ ವಿಚಾರಗಳನ್ನೊಳಗೊಂಡಂತೆ ಯಾವುದೋ ಒಂದು ಕೇಸು ಹೈಕೋರ್ಟಿನ ಮುಂದೆ ಇದೆ. ಇದರ ಬಗ್ಗೆ ಹೈಕೋರ್ಟಿನವರು ಏನು ಒಂದು ಗೈಡ್‌ಲೈನ್ ಕೊಡುತ್ತಾರೋ ಅದನ್ನು ಇಟ್ಟು ಅಪ್ಲೈ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಕಾಯುತ್ತಿದ್ದೇವೆ. ಹೈಕೋರ್ಟಿನಲ್ಲಿ ಸಿಮಿಲರ್ ಕೇಸ್ ಇರುವುದರಿಂದ, ನಾವು ಅವರನ್ನು ಒಂದಷ್ಟು ಬೇಗ

(ಶ್ರೀ ಡಿ. ದೇವರಾಜ ಅರಸ್)

ತೀರ್ಮಾನಕೊಟ್ಟು ಬಿಡಿ ಎಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತೇವೆ. There is nothing like influence before the High Court. Whatever decision is given in this regard, we would like to keep it as guide line with regard to these promotees and direct recruits.

ಶ್ರೀ ಎಚ್. ಡಿ ದೇವೇಗೌಡ.—ಮುಖ್ಯಮಂತ್ರಿಗಳು ಇನ್ನೊಂದು ಇಷ್ಯೂ ರೈಸ್ ಮಾಡಿದರು. ಇದೇ ಇಷ್ಯೂ ಬಗ್ಗೆ ಹಲವಾರು ಡಿಪಾರ್ಟಮೆಂಟ್‌ಗೆ ಅನ್ವಯವಾಗತಕ್ಕ ರಿಟ್ಸ್ ಮೇಲೆ ಆಗಲೇ ಹೈಕೋರ್ಟು ಡಿಸಿಷನ್ ಆಗಿದೆ. The High Court has opined in a different manner. ಪ್ರಮೋಟೀಸ್ ವರ್ಸಸ್ ಪ್ರೊಬೇಷನರ್ಸ್, ಪ್ರಮೋಷನ್ ಕೊಡತಕ್ಕಂಥದ್ದರ ಬಗ್ಗೆ ಒಂದೊಂದು ಇಲಾಖೆ ಯವರು ರಿಟ್ ಹೋದಂಥ ಕಾಲದಲ್ಲಿ ಒಂದೊಂದು ರೀತಿಯ ತೀರ್ಪನ್ನು ಹೈಕೋರ್ಟಿನವರು ಕೊಟ್ಟಿದ್ದಾರೆ. The anomaly is not in the Government Order. There are anomalies in the High Court decision.

SRI D DEVARAJ URS. - I am afraid he is not referring to a Full Bench Decision. We would like to have a Full Bench Decision. We want a Full Bench Decision from the High Court so that in future similar cases should not be decided on some other principle.

ಶ್ರೀ ಎಚ್. ಡಿ. ದೇವೇಗೌಡ.—ಹೈಕೋರ್ಟಿನಲ್ಲಿ ಫುಲ್ ಬೆಂಚ್ ಡಿಸಿಷನ್ ಆಗಿಲ್ಲ ಎಂದು ಆಯಿತು. ಇನ್ನೊಂದು ಪ್ರಶ್ನೆ ನಮಗೆ ಕ್ರಾಪ್ ಆಪ್ ಆಗುತ್ತದೆ. ಏನೆಂದರೆ ಈ ಹೈಕೋರ್ಟ್ ಹಿಂದೆ ಕೊಟ್ಟಂಥ ಆದೇಶದ ಮೇಲೆ ಏನು ಪ್ರೊಬೇಷನರ್ಸ್, ವರ್ಸಸ್ ಪ್ರಮೋಟೀಸ್ ಪ್ರಮೋಷನ್ ಎಫೆಕ್ಟ್ ಮಾಡಿ ಬಿಟ್ಟಿದ್ದೇವೆ, ಅದು ಈ ಫುಲ್ ಬೆಂಚ್ ಡಿಸಿಷನ್ ನಿರ್ಣಯ ಕೊಟ್ಟರೆ ಪುನಃ the entire thing has to be re-examined. That is again a trouble. Will the Government consider a suggestion to thrash out the whole matter in the light of the Full Bench Decision that is going to be given ?

SRI D DEVARAJ URS.—That is another question. Where the previous decisions have been implemented, perhaps it may not be possible to persons. But there are still so many Departments where things are still *ad hoc*. Where no final decision is taken, there only it may be possible.

ಶ್ರೀ ಕೆ. ಎಂ. ರುದ್ರಪ್ಪ : ಕೇಡರ್ ಆಂಡ್ ರಿಕ್ರೂಟ್‌ಮೆಂಟ್ ಕಮಿಟಿ ರೂಲ್ಸ್ ಪ್ರಕಾರ ೫ ವರ್ಷಗಳು ಸರ್ವೀಸ್ ಇರುವಂತ ಅಸಿಸ್ಟೆಂಟ್ ಇಂಜಿನಿಯರ್‌ನ್ನು, ಎಕ್ಸಿಕ್ಯೂಟಿವ್ ಇಂಜಿನಿಯರ್, ಆಗಿ ತೆಗೆದುಕೆ ಳ್ಳಬಹುದು. ರೂಲ್ಸ್ ಪ್ರಕಾರ ಇದೆ ಎಂದು ಹೇಳುತ್ತಿದ್ದಾರೆ. ೧೫ ವರ್ಷಗಳು ಸರ್ವೀಸ್ ಆಗಿರುವವರನ್ನು ಬಿಟ್ಟು ೬–೭ ವರ್ಷಗಳು ಆಗಿರುವವರನ್ನು ನೇಮಿಸಿದ್ದಾರೆ. ಅದು ಗಮನಕ್ಕೆ ಬಂದಿದ್ದಯೇ? ಗಮನಕ್ಕೆ ಬಂದಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಚ್. ಎಂ. ಚೆನ್ನಬಸಪ್ಪ :— ಈಗಾಗಲೇ ೫–೬ ಸಲ ಪುನಃ ಪುನಃ ಅದೇ ನೀತಿ ಅನುಸರಿಸು ವುದರಿಂದ ಈ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಬೇಕು ಎಂದು ಸರ್ಕಾರ ನಿರ್ಣಯಿಸಿದೆಯೆಂದು ನಾನು ತಿಳಿಸಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್ :— ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಹೈಕೋರ್ಟಿನ ತೀರ್ಮಾನದ ಬಗ್ಗೆ ಹೇಳಿದರು. ಹೈಕೋರ್ಟು ಫುಲ್ ಬೆಂಚ್ ತೀರ್ಮಾನ ಕೊಟ್ಟರುವುದು ಪ್ರೊಮೋಟೀಸ್ ವಿಷಯದಲ್ಲಿ ತಮ್ಮ ಗಮನಕ್ಕೆ ಬಂದಿದೆಯೇ? ಪ್ರೊಬೇಷನರ್ಸ್ ಆಡ್‌ಹಾಕ್ ಬೇಸಿಸ್, ಪ್ರೋಮೋಟಿಸ್ ಆಗಿರುವುದರಿಂದ ಅನೇಕರು ಸರ್ವೀಸ್ ಆಗಿರುವವರಿಗೆ ತೊಂದರೆಯಾಗುತ್ತದೆ. ಫುಲ್ ಬೆಂಚ್ ಡಿಸಿಷನ್ ಕಾದರೆ ಎಷ್ಟು ದಿವಸಗಳಾಗುತ್ತವೆ. ಫುಲ್ ಬೆಂಚ್ ಕಾನ್ಸ್‌ಟ್ಯೂಟ್ ಮಾಡಿಲ್ಲ ಮೊದಲು ಕ್ಯಾನ್ಸ್‌ಟ್ಯೂಟ್ ಮಾಡಬೇಕು ಆಂದರೆ ಒಂದು. ಒಂದೂವರೆ ವರ್ಷಗಳಿಗೆ ತೀರ್ಮಾನ ಆಗಬಹುದು. ಯಾರುಯಾರಿಗೆ ಪ್ರೋಮೋಷನ್ ಆಡ್‌ಹಾಕ್ ಬೇಸಿಸ್ ಮೇಲೆಮಾಡಿದ್ದಾರೆ ಅವರಿಗೆ ಏನಾಗುತ್ತದೆ? ಪ್ರೋಮೋಟಿಸ್‌ಗೆ ಜಸ್ಟಿಸ್ ಸಿಕ್ಕುವ ಹಾಗೆ ಮಾಡುತ್ತೀರಾ?

SRI H. M. CHANNABASAPPA :— I quite appreciate the hon. Member's feelings. Government also is very anxious to see that an appropriate and correct decision is taken in these matters. We expect the High Court to give a decision in the matter referred by the Hon. Chief Minister very early;

ಶ್ರೀ ಎಂ. ಎಚ್. ಜಯಂಪ್ರಕಾಶ್ ನಾರಾಯಣ್ :— ಮಾನ್ಯ ಮುಖ್ಯಮಂತ್ರಿಗಳಾಗಲಿ, ಲೋಕೋಪಯೋಗಿ ಮಂತ್ರಿಗಳಾಗಲಿ ಅಥವಾ ಹೈಕೋರ್ಟಾಗಲಿ ರಾಜ್ಯಾಂಗದ ನಿಯಮಾವಳಿಗಳ ವರ್ಣನೆಯನ್ನು ಮಿರಲಾರರು. ಈಗ ೫೪ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್‌ನಲ್ಲಿ ೧೪ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಪೋಸ್ಟ್ ಖಾಲಿ ಇರುವುದಕ್ಕೆ ಮೂಲ ಕಾರಣ ಏನು? ೧೦ ವರ್ಷಗಳಿಂದ ಪಿಡಬ್ಲ್ಯೂಡಿ ಡಿಪಾರ್ಟ್‌ಮೆಂಟ್ ಸಿ ಅಂಡ್ ಆರ್ ರೂಲ್ಸ್ ಇದ್ದರೂ ಸಹ ಡೈರೆಕ್ಟ್ ರಿಕ್ರ್ಯೂಟ್‌ಮೆಂಟ್ ಮಾಡದೆ ಇಷ್ಟು ಜೂನಿಯರ್ಸ್‌ನ್ನು ತಂದು ಇಟ್ಟಿದ್ದಾರೆ, ಈ ರೂಲ್ಸ್‌ಗಳಲ್ಲಿ ಇನ್‌ಕನ್ಸಿಸ್ಟೆನ್ಸಿ ಇದೆ, ಅನ್ಯಾಯ ಮಾಡಿದ್ದಾರೆ. ಮುಖ್ಯಮಂತ್ರಿಗಳು ಹೇಳತಕ್ಕದ್ದು ಸ್ವಾಭಾವಿಕವಾಗಿ ಒಪ್ಪಿಕೊಳ್ಳುವುದು ಆಗಿದೆ. ಆದರೆ ರಾಜ್ಯಾಂಗದಲ್ಲಿರುವಂತೆ ಪರ್ಸೆಂಟೇಜ್ ದೊರಕಿಲ್ಲ. ಆದ್ದರಿಂದ ರಾಜ್ಯಾಂಗದ ನಿಯಮಾವಳಿ ಪ್ರಕಾರ ಸಿ ಅಂಡ್ ಆರ್ ರೂಲ್ಸ್ ಗನುಗುಣವಾಗಿ ಹುದ್ದೆಗಳನ್ನು ಭರ್ತಿ ಮಾಡುತ್ತೀರಾ?

ಶ್ರೀ ಎಚ್. ಎಂ. ಚಿನ್ನಬಸಪ್ಪ :— ರಾಜ್ಯಾಂಗದಲ್ಲಿ ಏನೇನು ಅಭಿಪ್ರಾಯಗಳು ಒಳಗೊಂಡಿವೆ. ಅವುಗಳಿಗೆ ವಿರುದ್ಧವಾಗಿ ಸರ್ಕಾರ ಹೋಗುವುದಿಲ್ಲ. ಇಷ್ಟು ಮಾತ್ರ ನಾನು ಭರವಸೆ ಕೊಡಬಲ್ಲೆ.

ಶ್ರೀ ಜೆ. ಎಲ್. ಕಬಾಡಿ :— ಈ ರಾಜ್ಯಾಂಗದ ನಿಯಮಾವಳಿ ಪ್ರಕಾರ ಹರಿಜನರಿಗೆ ಅನ್ಯಾಯ ಮಾಡುವುದಿಲ್ಲ ಎಂದು ತಿಳಿದುಕೊಂಡು ಸರ್ಕಾರದ ಅಭಿಪ್ರಾಯ ಕಾದು ಕೂತರೆ ಆಗುವುದಿಲ್ಲ. ಸುಪ್ರೀಮ್ ಕೋರ್ಟ್ ಡಿಸಿಷನ್ ಏನು ಕೊಟ್ಟಿದೆ, ಉಚ್ಚ ನ್ಯಾಯಾಲಯ ಕೊಟ್ಟಂತೆ ನಿರ್ಣಯ ಏನು ಇದೆ, ಆ ನಿರ್ಣಯಕ್ಕೆ ಅನುಗುಣವಾಗಿ ಸರ್ಕಾರದವರು ಏಂಪ್ಲಾಯ್‌ಮೆಂಟ್ ಮಾಡುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ :— ಒಂದೇ ಮಾತಿನಲ್ಲಿ ಹೇಳಿದೆ, ರಾಜ್ಯಾಂಗದಲ್ಲಿ ಏನೇನು ಪ್ರೊವೈಡ್ ಆಗಿದೆ ಅದಕ್ಕೆ ನಾವು ನೀವು ಎಲ್ಲರೂ ಬದ್ಧರು. ಅದಕ್ಕೆ ವಿರುದ್ಧವಾಗಿ ಹೋಗುವುದು ಸಾಧ್ಯವಿಲ್ಲ, ಸರ್ಕಾರ ಮಾಡುವುದಿಲ್ಲ ಎಂದು ಹೇಳಿದ್ದೇನೆ. ಎಲ್ಲೋ ಯಾವುದೋ ಡಿಸಿಷನ್ ಸುಪ್ರಿಮ್ ಕೋರ್ಟು ಹೇಳಿದೆ ಎಂದು ಹೇಳಿದರೆ ಅದಕ್ಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ರಾಜ್ಯಾಂಗದಲ್ಲಿ ಇರತಕ್ಕ ಕಾಲಂಗಳ ಪ್ರಕಾರ ಏನು ಅಭಿಪ್ರಾಯ ಇದೆ ಅದಕ್ಕೆ ವಿರುದ್ಧವಾಗಿ ಹೋಗುವುದಕ್ಕೆ ಶಕ್ಯವಲ್ಲ ಎಂದು ಒಟ್ಟು ಅರ್ಥದಲ್ಲಿ ಹೇಳಿದೆ.

SRI M. MALLAPPA :— Is it a fact that before this Government took charge, the promotions to the posts of Executive Engineers were regularised as per the length of service of the Assistant Engsneers and if so, why it was not implemented?

SRI H. M. CHANNABASAPPA :— As I have already pointed out, there are different basis upon which these promotions have been effected and we are now at a moment when all these matters will have to be examined in relation to the recommendations of the Law Department and the various rulings that have been given by the High Court in the past and the rulings the High Court is likely to give shortly in the ease referred to by the Hon. Chief Minister.

SRI C. M. ARUMUGHAM :— Has it come to the notice of the Government that the High Court has held that in all appointments and promotions, reservation should be made for the Scheduled Castes and Scheduled Tribes?

SRI H. M. CHANNABASAPPA :— At this moment I am not aware of the particular decision the hon. Member is referring to. But as I have already pointed out, we will take all possible measures necessary to safeguard the interests of the Scheduled Castes and Scheduled Tribes as provided in the Constitution.

SMT. DAMAYANTI BORE GOWDA :— May I know the reasons for the withdrawal of the gradation list?

SRI H. M. CHANNABASAPPA :— I do not know what gradation list the hon. Member is referring to,

SRI C. M. ARUMUGHAM :— Government cannot say that they are not aware of the decision of the High Court.

SRI D. DEVARAJ URS :— The decision which the hon. Member Sri Arnmugham and other hon. Members are referring to is a separate decision which is not quite relevant to the question on hand and if a separate qaestion is put I can study and then answer.

ಶ್ರೀ ಎಚ್.ಡಿ. ದೇವೇಗೌಡ i—(ಈ) ಉತ್ತರವಾಗಿ ಹೇಳಿದಿರಿ. ೧೪ ಪೋಸ್ಟ್ಸ್ ಕಾಲಿ ಇವೆ ಎಂದು. ಇದ್ದದ್ದನ್ನು ಭರ್ತಿ ಮಾಡತಕ್ಕಂಥದ್ದು ಯಾವಾಗ? ಚೀಫ್ ಇಂಜಿನಿಯರ್, ಸೂಪರಿಟೆಂಡೆಂಟ್ ಇಂಜಿನಿಯರ್ ಹುದ್ದೆಗಳು ಭರ್ತಿಯಾಗಿಲ್ಲ. ಜೈಕೋರ್ಟು ಫುಲ್‌ಬೆಂಚ್ ಡಿಸಿಷನ್ ಕಾಯುವುದಕ್ಕೆ ಬರುವುದಿಲ್ಲ, ವರ್ಕ್ ಸಫರ್ ಆಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ. :— ಕೆಲಸಗಳಿಗೆ ತೊಂದರೆಯಾಗುತ್ತದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ತಕ್ಷಣದಲ್ಲೇ ಭರ್ತಿ ಮಾಡದ ಹೊರತು ಕೆಲಸಕಾರ್ಯಗಳು ನಡೆಸುವುದಕ್ಕೆ ಕಷ್ಟವಾಗಿದೆ. ಒಂದುಕಡೆ ಹಿಂದೆ ಮಾಡಿದಂಥ ಕ್ರಮ ಮುಂದುವರಿಸಿಕೊಂಡು ಹೋಗುವುದು ಅಷ್ಟು ಸಾಧುವಲ್ಲ ಎಂದೂ ನನ್ನ ಮನಸ್ಸಿಗೆ ಕಾಣಿಸುತ್ತದೆ. ಯಾವುದಾದರೂ ರೀತಿಯಲ್ಲಿ ಕಾಲಿ ಇರುವ ಹುದ್ದೆಗಳನ್ನು ಫಿಲ್ ಅಪ್ ಮಾಡಬೇಕು ಯಾವ ಮಾರ್ಗ ಅನುಸರಿಸಿದರೂ ತಪ್ಪಾಗುತ್ತದೆ. ಅದಕೋಸ್ಕರ ಸರ್ಕಾರ ತೀವ್ರವಾಗಿ ಯೋಚನೆ ಮಾಡುತ್ತಿದ್ದ. ಅತ್ತಕಡೆ ಕೆಲಸ ಮುಂದುವರಿಸಿಕೊಂಡು ಹೋಗಬೇಕು. ಹಿಂದಿನದನ್ನೇ ಅನುಸರಿಸಿಕೊಂಡು ಹೋದರೆ ನೀವು ತಪ್ಪು ಮಾಡುತ್ತೀರಿ ಎಂದು ಆಪಾದನೆಗಳು ಬರುತ್ತವೆ. ಆದ್ದರಿಂದ ನಾವು ಕೂಡ ತೀವ್ರವಾಗಿ ಆಲೋಚನೆ ಮಾಡುತ್ತಿದ್ದೇವೆ. ಇಷ್ಟು ಮಾತ್ರ ಹೇಳುತ್ತೇನೆ.

MADAM SPEAKER :— Question Hour is over.

QUESTION FOR ANSWERS ON THE DAY (BUT NOT TAKEN UP).

SCARCITY OF DRINKING WATER IN CHALLAKERE TOWN

584. SRI V. Masiyappa (Challakere) :—

Will the Minister for Municipal Administration be pleased to state :—

(a) Whether it has come to their notice that there is acute shortage of drinking water in Challakere town;